ಆರ್ಥಿಕ ಇಲಾಖೆಯ ಅನುಮತಿ ಪಡೆದು ನೇರ ನೇಮಕಾತಿಗೆ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಕ್ರಮವಹಿಸಲಾಗುವುದು.

ಸರ್ಕಾರಿ ಪ್ರಾಥಮಿಕ–ಪ್ರೌಢ ಶಾಲೆಗಳಲ್ಲಿ ಮೂಲಭೂತ ವ್ಯವಸ್ಥೆ

89 (373) ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಶಿಕ್ಷಣ ಹಕ್ಕು ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸರ್ಕಾರ ಹಮ್ಮಿಕೊಂಡ ಕ್ರಮಗಳೇನು

ಆ) ಈ ಕುರಿತು ಕೇಂದ್ರ ಸರ್ಕಾರದಿಂದ ಇದುವರೆಗೆ ಮಂಜೂರಾದ ಹಣದ ಮೊತ್ತ ಮತ್ತು ಖರ್ಚು ಮಾಡಿದ ಮೊತ್ತದ ವಿವರಗಳೇನು;

ಇ) ರಾಜ್ಯದ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಲು ಇಲಾಖೆಯ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ರಾಜ್ಯದಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನಕ್ಕಾಗಿ ಕರ್ನಾಟಕ ರಾಜ್ಯ ಕರಡು ನೀತಿಯನ್ನು ರೂಪಿಸಲಾಗಿದೆ. ಅಧಿಸೂಚನೆಗಾಗಿ ಸರ್ಕಾರದ ಹಂತದಲ್ಲಿದ್ದು, ಪರಿಶೀಲನೆಯಲ್ಲಿದೆ.

ಶಿಕ್ಷಣ ಹಕ್ಕು ಕಾಯಿದೆಯ ಬಗ್ಗೆ ಸಮುದಾಯದಲ್ಲಿ ಜಾಗೃತಿ ಮೂಡಿಸಲು ದಿನಾಂಕ 5.7.2011 ಹಾಗೂ ದಿನಾಂಕ 11.11.2011 ರಂದು ಎಲ್ಲಾ ಶಾಲೆಗಳಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಹಬ್ಬದ ರೀತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ರಾಜ್ಯ ತಯಾರಿಸಿರುವ ಕರಡು ನೀತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ, ಇದರ ಬಗ್ಗೆ ವಾರ್ತಾ ಪತ್ರಿಕೆಯಲ್ಲಿ ಜಾಹಿರಾತು ನೀಡಿ, ಸಾರ್ವಜನಿಕರಿಂದ, ಶಿಕ್ಷಣ ತಜ್ಞರಿಂದ, ಶಾಲೆಗಳಿಂದ, ಶಿಕ್ಷಕರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿ, ಕ್ರೋಢೀಕರಿಸಿ ಅದರಂತೆ ಕರಡು ನೀತಿಯನ್ನು ಪರಿಷ್ಕರಿಸಲಾಗಿದೆ.

ಇದರ ಬಗ್ಗೆ ಚರ್ಚಿಸಲು ವಿಭಾಗಮಟ್ಟದ, ಜಿಲ್ಲಾಮಟ್ಟದ ಕಾರ್ಯಾಗಾರಗಳನ್ನು ನಡೆಸಲಾಗಿದೆ.

ಆರ್.ಟಿ.ಇ. ಕಾಯಿದೆಯಲ್ಲಿನ ಕೆಳಕಂಡ ಅಂಶಗಳ ಬಗ್ಗೆ ಈಗಾಗಲೇ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ.

ಅ) ಶಾಲಾ ವಯಸ್ಸಿನ ಮಗುವಿನ ಶಾಲಾ ಪ್ರವೇಶದ ಬಗ್ಗೆ.

ಆ) ಜನನ ಪ್ರಮಾಣ ಪತ್ರ ನೀಡುವ ಬಗ್ಗೆ.

ಇ) ಶಿಕ್ಷೆ ಅಪರಾಧದ ಬಗ್ಗೆ: ಮಗು ಎಂಟು ವರ್ಷದ ಪ್ರಾಥಮಿಕ ಶಿಕ್ಷಣ ಪೂರೈಸುವವರೆಗೆ ಯಾವುದೇ ಕಾರಣದಿಂದ ಹೊರಹಾಕುವುದು / ನಿಲಂಭನದಲ್ಲಿಡುವುದನ್ನು ಮಾಡಕೂಡದು, 8ನೇ ತರಗತಿಯವರೆಗೆ ಅನುತ್ತೀರ್ಣತೆ ಇರುವುದಿಲ್ಲ, ತರಗತಿಗೆ ಸಂವಾದಿಯಾದ ಕಲಿಕೆಯ ಮೂಲಭೂತ ಸಾಮರ್ಥ್ಯಗಳನ್ನೂಗಳಿಸದ ಮಕ್ಕಳಿಗೆ ಪೂರಕ ಬೋಧನೆಯನ್ನು ಕೈಗೊಳ್ಳತಕ್ಕದ್ದು. ಪ್ರಾಥಮಿಕ ಶಿಕ್ಷಣವು ಪೂರ್ಣಗೊಳ್ಳುವವರೆಗೆ ಯಾವ ಮಗುವಿಗೂ ಮಂಡಳಿಗಳ ಪರೀಕ್ಷೆಯನ್ನು ನಡೆಸತಕ್ಕದ್ದಲ್ಲ. ಮಗುವಿನ ನಿಂದನೆಯನ್ನು ಪಠ್ಯಕ್ರಮ ನಿರ್ವಹಣೆಯ (ಶಾಲೆಯ ಸಮಗ್ರ ಚಟುವಟಿಕೆ) ಯಾವುದೇ ಸಂದರ್ಭದಲ್ಲಿ ಮಾಡತಕ್ಕದ್ದಲ್ಲ, ಮಗುವಿನ ನಿಂದನೆಯನ್ನು / ದೈಹಿಕ ದಂಡನೆ / ಶಿಕ್ಷೆ / ಹಿಂಸೆ : ಮಾನಸಿಕ ಹಿಂಸೆ, ತಾರತಮ್ಯ ಎಸಗುವುದು, ಲೈಂಗಿಕ ನಿಂದನೆ ಎಂಬ ಅರ್ಥದಲ್ಲಿ ಭಾವಿಸತಕ್ಕದ್ದು, ಈ ನಿಯಮದ ಉಲ್ಲಂಘನೆಯಾದಲ್ಲಿ ಪ್ರಚಲಿತವಿರುವ ಸಿ.ಸಿ.ಎ. ನಿಯಮಗಳಂತೆ ಅದಕ್ಕೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸತಕ್ಕದ್ದು.

ಈ) ಶಾಲಾ ಅವಧಿಯನ್ನು ನಿಗದಿಗೊಳಿಸುವ ಬಗ್ಗೆ.

ಉ) ಮಗುವಿನ ಶಾಲಾ ವರ್ಗಾವಣೆ ಬಗ್ಗೆ.

ಆರ್.ಟಿ.ಇ. ಕಾಯಿದೆಯಂತೆ ರಾಜ್ಯದಲ್ಲಿನ ಎಲ್ಲಾ 8ನೇ ತರಗತಿಯನ್ನು ಹಿರಿಯ ಪ್ರಾಥಮಿಕ ಶಾಲೆಯಡಿ ತರಲು ಅಗತ್ಯವಿರುವ ಆರ್ಥಿಕ ಅಗತ್ಯತೆ ಹಾಗೂ ಆಡಳಿತ ವ್ಯವಸ್ಥೆಯ ಬದಲಾವಣೆಯ ಬಗ್ಗೆ ಅಗತ್ಯ ಮಾಹಿತಿ ತಯಾರಿಸಿ, ಸರ್ಕಾರಕ್ಕೆ ನೀಡಲಾಗಿದೆ.

ಕಾಯಿದೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಉಸ್ತುವಾರಿ ನಡೆಸಲು ರಾಜ್ಯ ಸಲಹಾ ಸಮಿತಿಯನ್ನು ನೇಮಿಸುವ ಪ್ರಕ್ರಿಯೆ ನಡೆಯುತ್ತಿದೆ.

ಕಾಯಿದೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಮೇಲುಸ್ತುವಾರಿ ನಡೆಸಲು ಸ್ವಯಂಸೇವಾ ಸಂಘಟನೆಗಳ ಸಹಯೋಗವನ್ನು ಪಡೆಯಲು ಕ್ರಮಗೊಳ್ಳಲಾಗುತ್ತಿದೆ.

ಆ) 2010–11ನೇ ಸಾಲಿನಲ್ಲಿ ರೂ. 22460.249 ಲಕ್ಷಗಳ ಅನುದಾನವು ಪೂರಕ ಯೋಜನೆಗಾಗಿ ಮಂಜೂರಾಗಿದ್ದು, ಇದನ್ನು 2010–11ನೇ ಸಾಲಿನಲ್ಲಿ ವೆಚ್ಚ ಮಾಡಲಾಗಿದೆ.

2011–12ನೇ ಸಾಲಿನಲ್ಲಿ ರೂ. 32786.565 ಲಕ್ಷಗಳ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅನುಮೋದನೆ ನಿರೀಕ್ಷಿಸಲಾಗಿದೆ.

ಇ) ರಾಜ್ಯದ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಲು ಲೋಕ ಶಿಕ್ಷಣ ಇಲಾಖಾ ವತಿಯಿಂದ 15+ವಯೋಮಾನದ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ

ಸಾಕ್ಷರ ಭಾರತ್ ಕಾರ್ಯಕ್ರಮ:

ರಾಜ್ಯದಲ್ಲಿ 2001 ರ ಜನಗಣತಿ ಪ್ರಕಾರ ಶೇ. 50 ಕ್ಕಿಂತ ಕಡಿಮೆ ಮಹಿಳಾ ಸಾಕ್ಷರತಾ ಪ್ರಮಾಣ ಇರುವ ರಾಜ್ಯದ ಗದಗ್, ಬೀದರ್, ಬಾಗಲಕೋಟೆ, ಕೊಪ್ಪಳ ಮಂಡ್ಯ, ಹಾವೇರಿ, ಬೆಳಗಾವಿ, ಚಿತ್ರದುರ್ಗ, ಬೆಂಗಳೂರು ಗ್ರಾ. ಬಳ್ಳಾರಿ, ಬಿಜಾಪುರ, ಕೋಲಾರ ಮೈಸೂರು, ರಾಯಚೂರು, ಚಾಮರಾಜನಗರ, ತುಮಕೂರು, ಗುಲ್ಬರ್ಗಾ ಮತ್ತು ಯಾದಗಿರ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಕಾರ್ಯಕ್ರಮದಲ್ಲಿ 4091194 ಜನ 15+ ವಯೋಮಿತಿಯ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸಿ ದಿನಾಂಕ 31.03.2012 ರ ಅವಧಿಗೆ ರಾಜ್ಯದ ಸಾಕ್ಷರತಾ ಪ್ರಮಾಣವನ್ನು ಶೇ. 80–85 ಕ್ಕೆ ಹೆಚ್ಚಿಸುವ ಗುರಿ ಹೊಂದಿದೆ.

ಹಿಂದುಳಿದ ತಾಲ್ಲೂಕುಗಳಲ್ಲಿ ಸಾಕ್ಷರತಾ ಕಾರ್ಯಕ್ರಮ:

ಸಾಕ್ಷರ ಭಾರತ್ ಜಿಲ್ಲೆಗಳನ್ನು ಹೊರತುಪಡಿಸಿ ಡಾ॥ ಡಿ.ಎಂ. ನಂಜುಂಡಪ್ಪ ವರದಿಯನ್ವಯ ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ, ದಾವಣಗೆರೆ, ಉತ್ತರ ಕನ್ನಡ ಜಿಲ್ಲೆಗಳ ಹಿಂದುಳಿದ 21 ತಾಲ್ಲೂಕುಗಳಲ್ಲಿ ಒಟ್ಟು 2550 ಕಲಿಕಾ ಕೇಂದ್ರಗಳ ಮೂಲಕ 25550 ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸಲು ಸಾಕ್ಷರತಾ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.

ಮದ್ದೂರು ತಾಲ್ಲೂಕಿಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕಾಮಗಾರಿ

90 (398) ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು) :– ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

ಅ) ಕಳೆದ ಮೂರು ವರ್ಷಗಳಲ್ಲಿ ಮದ್ದೂರು ತಾಲ್ಲೂಕಿಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಮಂಜೂರಾಗಿರುವ ಕಾಮಗಾರಿಗಳಾವುವು.

ಆ) ಈ ಕಾಮಗಾರಿಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನದ ಮೊತ್ತವೆಷ್ಟು (ಕಾಮಗಾರಿವಾರು ವಿವರಗಳನ್ನು ನೀಡುವುದು);